ಮಯೂರ ವಿಶೇಷ

# ಮೀರಾಗೆ ಗಾಂಧೀಜಿ ಬರೆದ ಪತ್ರಗಳು!



ಮಂಜುನಾಥ್ ಚಾಂದ್

ಈಸ್ಟ್ ಇಂಡಿಯಾ ಸ್ಕ್ವಾಡ್ರನ್ ಕಮಾಂಡರ್–ಇನ್–ಚೀಫ್ ಎಡ್ಮಂಡ್ ಸ್ಲೇಡ್ ಅವರ ಮಗಳು ಮೆಡಲಿನ್ ಸ್ಲೇಡ್. ಆಕೆಯ ಅಜ್ಜ ಕೂಡ ಬ್ರಿಟಿಷ್ ಸೇನೆಯಲ್ಲಿ ಕೆಲಸ ಮಾಡಿದವರು. ಮೆಡಲಿನ್‌ಗೆ ಬಿಥೋವನ್ ಸಂಗೀತವೆಂದರೆ ಪ್ರಾಣ. ಆ ಕಾರಣಕ್ಕೆ ಪರಿಚಯವಾದವರು ರೋಮೇನ್ ರೋಲ್ಯಾಂಡ್. 'ಈ ಜಗತ್ತಿನಲ್ಲಿ ಯೇಸು ಕ್ರಿಸ್ತನಿಗೆ ಸಮಾನವಾದ ವ್ಯಕ್ತಿತ್ವ ಎಂದರೆ ಅದು ಭಾರತದ ಮಹಾತ್ಮ ಗಾಂಧಿ' ಎಂದು ಆತ ಹೇಳಿದಾಕ್ಷಣ ಗಾಂಧಿ ಬಗ್ಗೆ ತಿಳಿದುಕೊಳ್ಳಲೇಬೇಕು ಎಂದು ಮೆಡಲಿನ್ ಹಟಕ್ಕೆ ಬೀಳುತ್ತಾಳೆ. ಆ ಹೊತ್ತಿಗೆ ರೋಲ್ಯಾಂಡ್, 'ಮಹಾತ್ಮ ಗಾಂಧಿ' ಎಂಬ ಹೆಸರಿನಲ್ಲಿಯೇ ಒಂದು ಪುಸ್ತಕ ಬರೆಯುತ್ತಿದ್ದರು. ಅದು ಮಾರುಕಟ್ಟೆಗೆ ಬರುತ್ತಲೇ ಒಂದೇ ಗುಕ್ಕಿನಲ್ಲಿ ಓದಿ ಮುಗಿಸಿದ ಮೆಡಲಿನ್ ಸ್ಲೇಡ್ ಗಾಂಧಿಯ ಸೆಳೆತಕ್ಕೆ ಒಳಗಾಗುತ್ತಾರೆ. ತಾನು ಈಗ ಬದುಕುತ್ತಿರುವುದು ಬದುಕೇ ಅಲ್ಲ ಎಂದು ಆಕೆಗೆ ಅನಿಸುತ್ತದೆ. ಗಾಂಧಿಗೊಂದು ಪತ್ರವನ್ನೂ ಬರೆದು, 'ನಿಮ್ಮ ಹೋರಾಟದಲ್ಲಿ ಬಂದು ಸೇರಿಕೊಳ್ಳುತ್ತೇನೆ' ಎಂದು ತಿಳಿಸುತ್ತಾಳೆ. 'ಈ ಹೋರಾಟ, ಆಶ್ರಮ ಜೀವನ ಬಲು ದುಸ್ತರ. ಇನ್ನೂ ಒಂದು ವರ್ಷ ಯೋಚನೆ ಮಾಡಿ. ಅಷ್ಟಾಗಿಯೂ ನಿಮ್ಮ ಆಂತರಿಕ ಪ್ರೇರಣೆಯನ್ನು ಪಾಲಿಸಬೇಕು ಅನ್ನಿಸಿದರೆ ಬಂದು ಬಿಡಿ' ಎಂದು ಗಾಂಧೀಜಿ ಹೇಳುತ್ತಾರೆ. ದೃಢನಿರ್ಧಾರ ಮಾಡಿದ ಮೆಡಲಿನ್ ಒಂದು ವರ್ಷ ಕಾಲ ಆಶ್ರಮ ಜೀವನಕ್ಕೆ ಬೇಕಾದ ಕಠಿಣ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾಳೆ. ಉಪನಿಷದ್, ರಾಮಾಯಣ, ಮಹಾಭಾರತ, ಭಗವದ್ಗೀತೆ ಓದುತ್ತಾಳೆ. ಗದ್ದೆಯಲ್ಲಿ ನಾಟಿ ಮಾಡುತ್ತಾಳೆ. ನೂಲುವುದನ್ನು ಅಭ್ಯಾಸ ಮಾಡುತ್ತಾಳೆ. ವರ್ಷದ ಬಳಿಕ ತನ್ನಲ್ಲಿರುವ ಸಕಲ ಸಂಪತ್ತನ್ನೂ ತ್ಯಜಿಸಿ, ಖಾದಿ ಬಟ್ಟೆಯನ್ನು ಧರಿಸಿ, ಇಂಗ್ಲೆಂಡ್‌ನಿಂದ ಭಾರತಕ್ಕೆ ಹೊರಟು ನಿಲ್ಲುತ್ತಾಳೆ.

ಹಾಗೆ ಗುಜರಾತ್‌ನ ಸಬರಮತಿ ಆಶ್ರಮವನ್ನು ಬಂದು ಸೇರಿಕೊಂಡಿದ್ದು 1925ರ ನವೆಂಬರ್ ಏಳನೇ ತಾರೀಕು. ಆಗ ಆಕೆಯ ವಯಸ್ಸು 33. ಅಂದು 'ಇಂದಿನಿಂದ ನೀನು ನನ್ನ ಮಗಳು' ಎಂದು ಬಾಚಿ ತಬ್ಬಿಕೊಂಡ ಗಾಂಧಿ ಆಕೆಗೆ 'ಮೀರಾ ಬೆಹನ್' ಎಂದು ಹೆಸರಿಡುತ್ತಾರೆ. ಅಂದಿನಿಂದ ಗಾಂಧಿ ಜೀವನದ ಭಾಗವೇ ಆಗುವ ಮೀರಾ ಬೆಹನ್ ಒಂದರ್ಥದಲ್ಲಿ 'ಮಹಾತ್ಮನ ಮಾನಸ ಪುತ್ರಿ' ಎಂದೇ ಬಿಂಬಿತಳಾಗುತ್ತಾಳೆ. 1925ರಿಂದ ಗಾಂಧಿ ಹುತಾತ್ಮರಾಗುವ 1948ರವರೆಗೂ ಅವರ ನಡುವೆ ಪತ್ರ ವ್ಯವಹಾರಗಳು ನಡೆಯುತ್ತವೆ. ಹಾಗೆ 23 ವರ್ಷಗಳ ಅವಧಿಯಲ್ಲಿ ಬರೆದ ಪತ್ರಗಳ ಸಂಖ್ಯೆ 650. ಅವೆಲ್ಲವನ್ನೂ ತನ್ನ ಜೀವದಂತೆ ಕಾಪಿಟ್ಟುಕೊಂಡ ಮೀರಾ, ಗಾಂಧಿ ನಿಧನದ ಬಳಿಕ 1949ರಲ್ಲಿ 'ಬಾಪೂಸ್ ಲೆಟರ್ ಟು ಮೀರಾ' ಎಂಬ ಹೆಸರಿನಲ್ಲಿ ಪುಸ್ತಕವನ್ನು ಪ್ರಕಟಿಸಿದ್ದಾಳೆ. ಅದರಲ್ಲಿ ಆಯ್ದ 386 ಪತ್ರಗಳಿವೆ. ಅವುಗಳಲ್ಲಿ ಕೆಲವು ಪತ್ರಗಳನ್ನು ಲೇಖಕ ಮಂಜುನಾಥ್ ಚಾಂದ್ ಅವರು ಅನುವಾದಿಸಿದ್ದು, ಮಯೂರ ಓದುಗರಿಗಾಗಿ ಇಲ್ಲಿವೆ.